V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಚೀಫ್ ಇಂಜನೀರ್ ಸಾಹೆಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ಪಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲಾ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ ಯಂಟು ದಿನಗಳ ಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟ್ಬಾಂಡ್ ಎಂಬ ಕರಾರು ಪತ್ರವನ್ನ ಬರದುಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದು ಮಾಡಲ್ಪಟ್ಟು ಶೇವಣಾತಿ ಹಣವನ್ನ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ ಆಫಿಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್ ಮೇಲೆ ಬರೆದು ಚಿಕಟಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬ್ದೊರಿಯಲಾರದು.

VIII. ಯಾವದಾದರು ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರಿಗೆ ವಾಪಸು ಮಾಡಲ್ಪಡುತ್ತೆ.

ತಾರೀಖು 6ನೇ ಮಾಹೆ ಜೂ೯ 1890ನೇ ಇಸವಿ ಮೊಕ್ಕಾಂ, ಚಿಕ್ಕಮಗಳೂರು.

ಫಾರಂ

ಕೆಲಸದ ವಿವರ	ಕೆ	ಮೊತ್ತ	ಕಂಟ್ರಾಕ್ಟ್ದಾರು ಕೆಲಸ ಮಾಡುವದಕ್ಕೆ ಒಪ್ಪುವ ದರ
ಮಣ್ಣು ಕೆಲಸ ಪಾಯಬೋದಿ ಮತ್ತು ಸ್ಥಳ ಪೂಕ್ ಮಾಡುವದು ..	ಸಲೆ ಗಜ	2,053	
ಡಿಟೋ ಡಿಟೋ ಹಾಕುವದು ..	ಡಿಟೋ	2,153	
ಪಾಯ ತಳಕ್ಕೆ ವಡದಕಲ್ಲು ಮತ್ತು ಗಾರೆಯಿಂದ ವಜ್ರಗಾರೆ ಕೆಲಸ ..	ಸಲೆ ಅಡಿ	2,396	
ಸುಟ್ಟಕಲ್ಲು ಗಾರೆ ಕೆಲಸ	ಡಿಟೋ	29,790	
ಕವಾನಿಗೆ ಸುಟ್ಟಕಲ್ಲು ಕೆಲಸ	ಡಿಟೋ	2,603	
ಸುಟ್ಟಕಲ್ಲು ಹಲಿಗೆಗಳು	ಚದರ ಅಡಿ	815	
ಸಂದುಗಾರೆ ಕೆಲಸ	ಡಿಟೋ	10,240	
ರಸ್ತೆಗೆ ಮೆಟ್ಟಿಲ್ ಹಾಕಿ ಗ್ರಾವಲ್ ಬಜಾಯಿಸುವದು	ಗಜ	227	
ಯೇರಿಗೆ ಹೆಪ್ಪು ಕಟ್ಟುವದು	ಬದರಗಜ	1,343	
ತಡೆಕಲ್ಲು ಯಾ ಗಿರ್ಲಿ ಕಲ್ಲುಗಳು	ನಂಬರ್	8	
ಸಾರಕಟ್ಟು	ಮೊತ್ತ ರೂ.		
ನೀರು ತೆಗೆಯುವದು	ಡಿಟೋ		

ಡಿ. ಸೀತಾರಾಮರಾವ್,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಪ್ರಸಿದ್ಧ ಪತ್ರಿಕೆ.

ತಾರೀಖು 5ನೇ ಜೂ೯ 1890.

ಮೈಸೂರಿನಲ್ಲಿ ಕಟ್ಟಲ್ಪಟ್ಟಿರತಕ್ಕ "ಜ್ಯಾಬಿಲಿ ಇನ್ಸ್ಟ್ಯೂಟ್ಯೂಟ್" ಯೆಂಬ ಕಟ್ಟಡದಲ್ಲಿ ಇಡಲ್ಪಡುವದಕ್ಕೋಸ್ಕರ ಶಿಲೆಯಲ್ಲಿ ಆಗಲಿ ಅಥವಾ ಲೋಹದಲ್ಲಿ ಆಗಲಿ ಮಾಡಲ್ಪಟ್ಟಿರತಕ್ಕ ಹಿಂದೂ ದೇವರುಗಳ ವಿಗ್ರಹಗಳನ್ನು ಚದರ ಅಡಿ ವಂದಕ್ಕೆ 2½ ರೂಪಾಯಿ ದರದ [redacted]ಂಡುಕೊಳ್ಳುತ್ತೇವೆ. ವಿಗ್ರಹಗಳ ವುನ್ನತವು 2 ಅಡಿ 3 ಅಂಗುಲ ಅಥವಾ 1 ಅಡಿ 3 ಅಂಗುಲ ಯಿರಬೇಕು. ಯಿಷ್ಟ ವಿದ್ದ [redacted]ಬರದುಕೊಳ್ಳಬಹುದು.

ಸ್ಟ್ಯಾಂಡಿಷ್ ಲೀ,
ಸ್ಯಾನಿಟರಿ ಇಂಜನಿಯರ್ ಮೈಸೂರ್ ಸ್ಪೆಷಲ್ ಇಂಪ್ರೂವ್ಮೆಂಟ್ ಡಿವಿಸ್.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರು ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ. ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳು ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲು ಮೈಸೂರು ಕೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಛಪ್ ಮಾಹೇ ಯಾ ಕ್ವಾರ್ಟರಿಗೆ		ದಾಮೋಷಾಯಿ ಪ್ರಕಾರ ದರಗಳು.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಸ್ ಯಾ ಆಕ್ಟ್ಯುಗಳು ಯಾವದೂ ಇಲ್ಲದಿದ್ದರೆ.		0 8
ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೆಳಿ ಪಡೆಯಿಸಿಕೊಳ್ಳಬಹುದು.		
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟ್ಸು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸುಗಳು:—		
ಮೊದಲನೇ ದಫಾ ಘೋಷಿಸ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..		2 8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ		1 4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್ನುಗಳ ಬಗ್ಯೆ ನೋಟಿಸುಗಳಿಗೆ:—		
ಮೊದಲನೇ ಸಲಕ್ಕೆ		5 0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ		2 8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.		
ಜ್ಯೂಡಿಷಿಕೇಟ್ ಕಾಪೀಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸುಗಳಿಗೆ :—		
ಮೊದಲನೇ ಸಲಕ್ಕೆ .. ಪುಟ 1ಕ್ಕೆ ..		10 0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, ..		5 0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಜ್ಜಿ 1ಕ್ಕೆ ..		0 8
ಎರಡನೇ ದಫಾ ಡಿಟೋ ಡಿಟೋ ..		0 6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..		0 4

ಪಡಾ.— ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟ್ಯಾಗ ರೂಪಾಯಿಗೆ ಎಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜ್‌ಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರು ದಿವಾನರವರ ಜೀಫ್ ಸೆಕ್ರಿಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರು ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸಿಹಾರ್‌ನಾಮೆಗಳು ಆ ಗೆಜೆಟ್ ಛಾಪಿಸಲ್ಪಡುವ. ಹಿಂದಿನ ಗುರುವಾರ ದಿವಸ ಸಾಯಂಕಾಲ 5 ಘಂಟೆ ವಳಗಾಗಿ ಕಂಪ್ಲೈರಿ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಯಿಲ್ಲ.

ಟಿ. ಟಿ. ಲೆನಾರ್ಡ್,
ಮೈ. ಗೆ. ಕಂಪ್ಟ್ರೊಲರ್.

ಸ್ವಂತ ಪ್ರಕಟನೆ.

ಹೊಸಕೋಟೆ ತಾಲ್ಲೂಕು ವೆಂಕಟಾಪುರ ಧನಸಹಾಯದ ಕಂಪೆನಿ ಲಿಮಿಟೆಡ್ ಆಫಿಸಿನಿಂದ.

ಇದರಿಂದ ಸಮಸ್ತ ಮೆಂಬರುಗಳು ಕೃತಪಡಿಸಿಕೊಳ್ಳುವದು ಯೇನಂದರೆ—ಈ ಕಂಪೆನಿಯನ್ನ ಸ೯ 1890ನೇ ಇಸವಿ ಏಪ್ರೆಲ್ ತಾರೀಖು 16—30ನೇದರಲ್ಲಿ ಮೀಟಿಂಗ್ ಮಾಡಿ ಮೀಟಿಂಗಿನಲ್ಲಿ ಮೆಂಬರಗಳಿಂದ ತೀರ್ಮಾನಿಸಲ್ಪಟ್ಟು ರೈಡಪ್ ರೂಲ್ಸನ್ನ ರಿಜಿಸ್ಟರ್‌ಮಾಡಿಸಿ ಯಿದೆ. ಮೆಂಬರಿಗೆ ಸಲ್ಲಬೇಕಾದ ದಾಮೋಷಾಯಿ ಪ್ರಕಾರ ಮೊಬಲಗನ್ನ ಬ್ರಾಂಚ್ ಪಿಜಂಟರ ಮೂರೀಫತ್ತು ಪಾವತಿ ಆಗಲ್ಪಡುತ್ತೆ.

ಸುಬ್ಬಯ್ಯ, ಪ್ರೆಸಿಡೆಂಟ್.

ತಾರೀಖು 9—6—90ನೇ ಇಸವಿ.

Mysore Govt. Central Press, Bangalore—1890.